MVC 813/2024 PW-1

**ದಿನಾಂಕಃ 25-09-2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲ ರಿಂದಃ</u>**

1. ಚಾರ್ಜ್ ಶೀಟ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ-5 ಎಂದು** ಗುರುತಿಸಲಾಯಿತು.
2. ಸ್ಥಳ ಪಂಚನಾವೆಯ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ-6 ಎಂದು** ಗುರುತಿಸಲಾಯಿತು.
3. ಕಚ್ಚಾ ನಕಾಶೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ- 7 ಎಂದು** ಗುರುತಿಸಲಾಯಿತು.
4. ವಾಹನ ಪರಿಶೀಲನಾ ಪಂಚನಾಮೆಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ- 8 ಎಂದು** ಗುರುತಿಸಲಾಯಿತು.
5. ಶವ ತನಿಖಾ ವರದಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ- 9 ಎಂದು** ಗುರುತಿಸಲಾಯಿತು.
6. ಐಎಂವಿ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ-10 ಎಂದು** ಗುರುತಿಸಲಾಯಿತು.

**<u>ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ</u>**

**1.** ಮೃತನ ಆ ದಿನ ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ನನ್ನ ಗಂಡನಿಗೆ ಸೇರಿದ್ದು. ಅಪಘಾತವಾಗುವ 2 ವರ್ಷದ ಹಿಂದೆ ಸದರಿ ವಾಹನವನ್ನು ಖರೀದಿಸಿರುತ್ತಾರೆ. ಮೃತನಿಗೆ ಚಾಲನಾ ಪರವಾನಗೆ ಇತ್ತು , ಅದನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಸದರಿ ದಾಖಲೆ ಅಪಘಾತದ ಸಮಯದಲ್ಲಿ ನನ್ನ ಯಜಮಾನರ ಬಳಿ ಇತ್ತು ಎಂದು ನುಡಿಯುತ್ತಾರೆ. ಸದರಿ ವಾಹನಕ್ಕೆ ವಿಮೆ ಚಾಲ್ತಿಯಲ್ತಿತು. ಅದನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಸದರಿ ದಾಖಲೆ ಅಪಘಾತದ

ಸಮಯದಲ್ಲಿ ನನ್ನ ಯಜಮಾನರ ಬಳಿ ಇತ್ತು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳು ಸಂಬಂಧಪಟ್ಟ ಇಲಾಖೆಯಿಂದ ತಂದು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದ ಸಮಯದಲ್ಲಿ ಮೃತನು ಹೆಲ್ ಮೆಟ್ ಧರಿಸದೇ ಚಾಲನಾ ಪರವಾನಗೆ ಇಲ್ಲದೆ , ಮದ್ಯಪಾನ ಮಾಡಿಕೊಂಡು ರಸ್ತೆ ನಿಯಮವನ್ನು ಪಾಲಿಸದೇ ಹೋಗುತ್ತಿದ್ದ ಕಾರಣ , ಯಾವುದೇ ಅಪರಿಚಿತ ವಾಹನದಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ, ನಾನು ಅಪಘಾತವನ್ನು ಕಣ್ಣಾರೆ ಕಂಡಿಲ್ಲ. ಅಪಘಾತದ ಬಗ್ಗೆ ಯಶೋಧರ ಎಂಬುವರು ಮಾಹಿತಿ ನೀಡಿರುತ್ತಾರೆ. ನಾವು ಅಪಘಾತದ ಸ್ಥಳಕ್ಕೆ ಹೊಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಅಪಘಾತಪಡಿಸಿದ ವಾಹನ ಸ್ಥಳದಲ್ಲಿ ಇತ್ತು. ನಾವು ಸ್ಥಳಕ್ಕೆ ಹೋದಾಗ ಅಪಘಾತಪಡಿಸಿತ್ತು ಎನ್ನಲಾದ ವಾಹನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

2. ಮುದಿಗೆರೆ ಮತ್ತು ಶಿರಾ ಕೋಟೆ ಅಕ್ಕ ಪಕ್ಕದ ಊರುಗಳು ಎಂದರೆ ಸರಿ. ಪ್ರಶ್ನಿತ ವಾಹನ ಚಾಲಕ ನನಗೆ ಪರಿಚಯಸ್ಥನೆಂದರೆ ಸರಿಯಲ್ಲ. ಸದರಿ ಚಾಲಕನು ನಮ್ಮ ಕುಟುಂಬಕ್ಕೆ ಪರಿಚಯಸ್ಥನಾದ ಕಾರಣ ಯಾವುದೇ ಅಪಘಾತವಾಗದೇ ಇದ್ದರೂ ಪ್ರಶ್ನಿತ ವಾಹನವನ್ನು ಸುಳ್ಳಾಗಿ ಸಿಲುಕಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಶಿರಾದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಪ್ರಶ್ನಿತ ವಾಹನದಿಂದ ಯಾವುದೇ ಅಪಘಾತ ಆಗದೇ ಇದ್ದರೂ ಸುಳ್ಳು ದೂರು ದಾಖಲಪಿಸಿರುತ್ತೇನೆ ಎಂದರೆ ಸರಿಯಲ್ಲ.

3. ಮೃತರು ತಿಂಗಳಿಗೆ 30 ಸಾವಿರ ಮತ್ತು ವರ್ಷಕ್ಕೆ 2 ಲಕ್ಷ ಸಂಪಾದನೆ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಯಜಮಾನರು 2 ನೇ ತರಗತಿವರೆಗೆ ಓದಿರುತ್ತಾರೆ. ಮೃತನ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಇದೆ , ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದ ಸಮಯದಲ್ಲಿ ಮೃತನಿಗೆ ಸುಮಾರು 40 ವರ್ಷ ವಯಸ್ಸಾಗಿದ್ದು , ಆಧಾರ್ ಕಾರ್ಡ್ ಹಾಜರುಪಡಿಸಿದರೆ ನಿಜವಾದ ವಯಸ್ಸು ಗೊತ್ತಾಗುತ್ತದೆ ಎಂದು ಆಧಾರ್ ಕಾರ್ಡ್ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು 40 ವರ್ಷ ವಯಸ್ಸಾಗಿತ್ತು ಎಂದು

ನುಡಿಂಹತ್ತಾರೆ, ಯಶೋಧರವರ ಸಾಕ್ಷ್ಯ ನುಡಿಸಲು ತೊಂದರೆ ಇಲ್ಲ. ಪರಿಹಾರಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿ , ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.